ಕರ್ನಾಟಕ ಸರ್ಕಾರ

(ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತ್)

# ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕೊಠಡಿ ಸಂಖ್ಯೆ: 126, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು–562110

ಸಂಖ್ಯೆ: ಸಿ5/ಸ.ಪ್ರೌ.ಶಾ./ರೆಡ್‌ಕ್ರಾಸ್ 01/2020–21 ದಿನಾಂಕ: 22–12–2020

ನೆನಪೋಲೆ–1 ಅತಿ ತುರ್ತು

:: ಜ್ಞಾಪನ ::

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ

ಉಲ್ಲೇಖ: 1. ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಪತ್ರ ಸಂಖ್ಯೆ: ಸಿ4(6)ಸ.ಪ್ರೌ.ಶಾ.ರೆಡ್‌ಕ್ರಾಸ್ 94/2012–13, ದಿನಾಂಕ: 23–06–2020

2. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 19–08–2020

3. ಪ್ರಧಾನ ಕಾರ್ಯದರ್ಶಿ–ಪ್ರಭಾರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ಬೆಂಗಳೂರು ರವರ ಪತ್ರ ಸಂಖ್ಯೆ: ಐ.ಆರ್.ಸಿ.ಎಸ್. ಜೆ.ಆರ್.ಸಿ–ಆರ್. /1188 1221/2020–21, ದಿನಾಂಕ: 14–09–2020

<><><><>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ–1ರ ಪತ್ರದಲ್ಲಿ ಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಶಾಖೆಗಳನ್ನು ಪ್ರಾರಂಭಿಸುವ ಸಲುವಾಗಿ, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ವಾರ್ಷಿಕವಾಗಿ ಶಾಲಾ ಸದಸ್ಯತ್ವದ ಶುಲ್ಕ ರೂ. 100/– ಗಳನ್ನು ಪಾವತಿಸಿ ನೋಂದಾಯಿಸಿಕೊಳ್ಳುವುದು ಹಾಗೂ ಪ್ರೌಢಶಾಲೆಗಳ ( 8 ರಿಂದ 10ನೇ ತರಗತಿ ವಿದ್ಯಾರ್ಥಿಗಳು) ರೂ. 10/– ಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಪಡೆದು ಅದರಲ್ಲಿ ರೂ. 6–00 ಗಳನ್ನು ಕಿರಿಯ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಹಾಗೂ 4–00 ಗಳನ್ನು ಕಿರಿಯ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವಂತೆ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಶಾಖೆಗಳನ್ನು ಪ್ರಾರಂಭಿಸಿ, ವಾರ್ಷಿಕವಾಗಿ ಶಾಲಾ ಸದಸ್ಯತ್ವದ ಶುಲ್ಕ ರೂ. 100–00 ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಡಿಡಿ/ಚೆಕ್ ಮೂಲಕ ಪಾವತಿ ಮಾಡಲು ಮತ್ತು ಪ್ರೌಢಶಾಲೆಗಳ ( 8 ರಿಂದ 10ನೇ ತರಗತಿ) ಪ್ರತಿ ವಿದ್ಯಾರ್ಥಿಗಳಿಂದ ರೂ. 10/– ಗಳನ್ನು ಪಡೆದು ಅದರಲ್ಲಿ ರೂ. 6–00 ಗಳನ್ನು ಕಿರಿಯ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಉಳಿಸಿಕೊಂಡು ಹಾಗೂ 4–00 ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಡಿಡಿ/ಚೆಕ್ ಮೂಲಕ ಪಾವತಿ ಮಾಡಲು ಶಾಲಾ ಮುಖ್ಯ ಶಿಕ್ಷಕರಿಗೆ ಸೂಚಿಸಲು ಉಲ್ಲೇಖ–2 ರಲ್ಲಿ ತಿಳಿಸಲಾಗಿತ್ತು.

ಆದ್ದರಿಂದ ನಿಮ್ಮ ತಾಲ್ಲೂಕಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಶಾಖೆಗಳನ್ನು ಪ್ರಾರಂಭಿಸಿ, ವಾರ್ಷಿಕವಾಗಿ ಶಾಲಾ ಸದಸ್ಯತ್ವದ ಶುಲ್ಕ ರೂ. 100–00 ಗಳನ್ನು ಪಾವತಿಸಿ ನೋಂದಾಯಿಸಿಕೊಂಡಿರುವ ಶಾಲೆಗಳ ಸಂಖ್ಯೆ ಮತ್ತು ಬಾಕಿ ಇರುವ ಶಾಲೆಗಳ ಸಂಖ್ಯೆಯನ್ನು ದಿನಾಂಕ: 31–12–2020 ರೊಳಗಾಗಿ ಸಲ್ಲಿಸುವಂತೆ ತಿಳಿಸಿದೆ. (ಇದರೊಂದಿಗೆ ಸರ್ಕಾರದ ಆದೇಶ ಮತ್ತು ಅರ್ಜಿ ಪ್ರತಿಯನ್ನು ಲಗತ್ತಿಸಿದೆ)

ಉಪನಿರ್ದೇಶಕರು (ಆಡಳಿತ)
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಗೆ,

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕು ರವರಿಗೆ ಅಗತ್ಯ ಕ್ರಮಕ್ಕಾಗಿ
2. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕು ರವರಿಗೆ ಅಗತ್ಯ ಕ್ರಮಕ್ಕಾಗಿ
3. 04 ತಾಲ್ಲೂಕಿನ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಿಗೆ ಈ ಬಗ್ಗೆ ಅನುಪಾಲನೆ ಮಾಡಲು ತಿಳಿಸಿದೆ.
4. 04 ತಾಲ್ಲೂಕಿನ ಸಿ.ಆರ್.ಪಿ. ಗಳಿಗೆ ಅಗತ್ಯ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

ಪ್ರತಿಯನ್ನು:

1. ಪ್ರಧಾನ ಕಾರ್ಯದರ್ಶಿ–ಪ್ರಭಾರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ. 26, ರೆಡ್‌ಕ್ರಾಸ್ ಭವನ, 1ನೇ ಮಹಡಿ, ರೇಸ್ ಕೋರ್ಸ್ ರೋಡ್, ಬೆಂಗಳೂರು–560001 ರವರಿಗೆ ಮಾಹಿತಿಗಾಗಿ
2. ಕಛೇರಿ ಪ್ರತಿ